ಶ್ರೀ ಕಾಗೋಡು ತಿಮ್ಮಪ್ಪ.— ಹಾಗೆಯೇ ತಾಲ್ಲೂಕು ಮತ್ತು ಪಂಚಾಯಿತಿ ಮಟ್ಟಕ್ಕೆ ವಿಸ್ತರಿಸುವುದಕ್ಕೆ ಸರ್ಕಾರ ಆಲೋಚನೆ ಮಾಡುತ್ತದೆಯೇ?

ಶ್ರೀ ದೇವೇದ್ರಪ್ಪ ಘಾಳಪ್ಪ.— ಪರಿಶೀಲನೆ ಮಾಡುತ್ತೇವೆ.

ಶ್ರೀ ಜಿ. ಪುಟ್ಟಸ್ವಾಮಿ.— ಇಲಾಖೆಯಲ್ಲಿ ಕೆಲಸ ಮಾಡತಕ್ಕ ಜೀಪುಗಳು ಎಷ್ಟು ಸರಿಯಾಗಿಲ್ಲ ಎಂದು ಹೇಳುತ್ತಾರೆಯೇ?

ಶ್ರೀ ದೇವೇಂದ್ರಪ್ಪ ಘಾಳಪ್ಪ — ಎಲ್ಲ ಕಡೆ ಸರ್ಕಾರದ ಎಲ್ಲ ಜೀಪುಗಳೂ ಚೆನ್ನಾಗಿವೆ.

ಶ್ರೀ ಜಿ. ಪುಟ್ಟಸ್ವಾಮಿ.— ವರ್ಷದಲ್ಲಿ ಈ ಜೀಪುಗಳು ಆರು ತಿಂಗಳು ಮಾತ್ರ ಕೆಲಸ ಮಾಡುತ್ತಿವೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ೧೨ ತಿಂಗಳೂ ಕೆಲಸ ಮಾಡುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆಯೇ?

ಶ್ರೀ ದೇವೇಂದ್ರಪ್ಪ ಘಾಳಪ್ಪ.—ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಚ್. ಎಸ್. ಸಿದ್ದಪ್ಪ.— ರಿಪಬ್ಲಿಕ್‌ಡೇ ಮತ್ತು ಸ್ವಾತಂತ್ರ್ಯದಿನಗಳು ಮಾತ್ರ ಅಧಿಕೃತ ಸಮಾರಂಭಗಳು ಎಂದು ಹೇಳಿದರು. ಸರ್ಕಾರದ ಮಾನ್ಯ ಸಚಿವರು ಭಾಗವಹಿಸತಕ್ಕ ಕಾರ್ಯಕ್ರಮಗಳು ಅಧಿಕೃತ ಸಮಾರಂಭಗಳು ಹೌದೇ ಅಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.— ಮಾನ್ಯ ಸದಸ್ಯರು ಭಾವಿಸಿದ ಹಾಗೆ.

ಶ್ರೀ ಕಾಗೋಡು ತಿಮಪ್ಪ.— ಡೆಲ್ಲಿ ಮತ್ತು ಗೋವದಲ್ಲಿ ವಾರ್ತಾ ಇಲಾಖೆಯ ಅಧಿಕಾರಿಗಳಿದ್ದಾರೆಂದು ಹೇಳಲಾಗಿದೆ. ಕರ್ನಾಟಕದ ಬಗ್ಗೆ ಮಾಹಿತಿಯನ್ನು ಕೊಡತಕ್ಕ ಯಾವ ಲಿಟರೇಚರ್ ಒದಗಿಸಲಾಗಿದೆ ಎನ್ನುವುದನ್ನು ತಿಳಿಸುವುದಕ್ಕಾಗುತ್ತದೆಯೇ?

SRI DEVENDRAPPA GHALLAPPA.— Notice Sir.

ESTABLISHMENT OF COURT AT AFZALPUR

610. SRI D. B. KALMANKAR (Afzalpur).—

Will the Minister for Law and Parliamentary Affairs be pleased to state.—

(*a*) Whether any representation is made by the public of Afzalpur taluk for establishing Court at Afzalpur;

(*b*) if so, whether there is any proposal before Government to establish it in the current year?

SRI D. K. NAIKAR (Minister for Law and Parliamentary Affairs).—

(*a*) Yes.

(*b*) No.

SRI D. B. KALMANKAR.— In view of the fact that it is a taluka place and as at present litigants have to go long distance of 40 miles, whether Government will consider the matter and sanction a court to Afzalpur?

† SRI D. K. NAIKAR.— Madam Speaker, last year in the year 1971 such a representation was made and the Government in consultation with the High Court came to know that the work is not sufficient to establish a separate court to Afzalpur. Now again another representation has been made and the High Court has to be consulted again.

SRI D. B. KALMANKAR.— How much time it will take to finally decide the issue?

SRI D. K. NAIKAR.— We cannot give the exact date and time.

SRI J. P. SARWESH.— The Hon'ble Minister said there is no work and if the Volume of work is increased, then only they can sanction a court to that place?

SRI D. K. NAIKAR.— There are certain rules as to what extent the munsiff has to dispose off cases. So if the work for the disposal of the munisff is not sufficient, then the question of establishing a court does not arise.

SRI S. M YAHYA.— Whether the Government or the High court has the final say in sanctioning the court?

SRI D. K. NAIKAR.— It is the Government which can establish a court on the recommendation and in consultation with the High Court.

SRI MALLIKARJUN — Whether in the interest of justice Government will consider the establishment of a court in each taluka so that people can have full justice?

SRI D. K. NAIKAR.— Goverament is thinking of establishing a separate court for each taluka.

ಶ್ರೀ ಎಸ್. ಎ. ಪಾಟೀಲ್ — ಯಾವುದೇ ಸ್ಥಳದಲ್ಲಿ ಕೋರ್ಟ್ ಎಸ್ಟಾಬ್ಲಿಷ್ ಮಾಡಬೇಕಾದರೆ ಯಾವ ಯಾವ ವಿಷಯಗಳನ್ನು ಪರಿಶೀಲನೆ ಮಾಡುತ್ತೀರಿ? ಸ್ಥಾನಿಕ ಜನರನ್ನು ಕೇಳುತ್ತೀರೋ ಇಲ್ಲವೊ?

ಶ್ರೀ ಡಿ. ಕೆ. ನಾಯಕರ್.— ಸ್ಥಾನಿಕ ಜನರ ಅಭಿಪ್ರಾಯವನ್ನೂ ಗಣನೆಗೆ ತೆಗೆದುಕೊಳ್ಳುತ್ತೇವೆ. ಅವರ ಮನವಿಯಲ್ಲಿ ಕೊಟ್ಟಿರುವುದನ್ನು ಗವರ್ನಮೆಂಟಲ್ಲಿಟ್ಟುಕೊಂಡು ಹೈಕೋರ್ಟ್‌ನೊಡನೆ ಸಮಾಲೋಚನೆ ಮಾಡಿ, ಒಂದು ಕೋರ್ಟ್ ಸ್ಥಾಪನೆ ಮಾಡುವುದಕ್ಕೆ ಸಾಕಷ್ಟು ಕೆಲಸವಿದೆ ಯೋ ಇಲ್ಲವೋ ಎನ್ನುವುದನು ಗವರ್ನಮೆಂಟಲ್ಲಿಟ್ಟು ಹೊಸ ಕೋರ್ಟನ್ನು ತೆಗೆಯಲಾಗುವುದು.

ಶ್ರೀ ಜಿ. ಪುಟ್ಟಸ್ವಾಮಿ.— ಗ್ರಾಮಾಂತರದಲ್ಲಿರುವ ಜನರಿಗೆ ನ್ಯಾಯ ದೊರಕಿಸಿಕೊಡುವುದಕ್ಕೆ ಸಲುವಾಗಿ ಮೊಬೈಲ್ ಕೋರ್ಟ್ಸ್ ವ್ಯವಸ್ಥೆ ಮಾಡುವ ಯೋಚನೆ ಸರ್ಕಾರಕ್ಕೆ ಇದೆಯೇ?

ಶ್ರೀ ಡಿ. ಕೆ. ನಾಯಕರ್.— ಅದನ್ನು ಕೂಡ ಸರ್ಕಾರ ಯೋಚಿಸುತ್ತ ಇದೆ.